## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್. ಜವರಾಯಗೌಡ ರವರು ನಿಯಮ-72 ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

**ವಿಷಯ:** ರಾಜ್ಯದ ಗ್ರಾಮಗಳಲ್ಲಿರುವ ಗ್ರಾಮಠಾಣ, ಊರುಗುಪ್ಪೆ, ಸರ್ವೆ ನಂಬರ್‌ನಲ್ಲಿ ಅನಾಧಿ ಕಾಲದಿಂದಲು ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ನಿವಾಸಿಗಳಿಗೆ ನಮೂನೆ 9 ಮತ್ತು 11ನೇ ಬಿ ನಮೂನೆ ವಿತರಿಸದೆ ಸಾರ್ವಜನಿಕರಿಗೆ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳು ತೊಂದರೆ ನೀಡುತ್ತಿದ್ದಾರೆ. ಅಲ್ಲಿನ ಚುನಾಯಿತ ಪ್ರತಿನಿಧಿಗಳು ಎಷ್ಟು ಹೇಳಿದರೂ ಸಹ ಕೇಳುತ್ತಿಲ್ಲ. ಮಾತೆತ್ತಿದರೆ ಸರ್ಕಾರದ ಆದೇಶವಿಲ್ಲವೆಂದು ಹೇಳಲಾಗುತ್ತಿದೆ. ಕೊಡಗು, ಮೈಸೂರು, ಚಾಮರಾಜನಗರ ಹಾಸನ ಮತ್ತಿತರ ಜಿಲ್ಲೆಗಳಲ್ಲಿ ನಮೂನೆ 9 ಮತ್ತು 11ನೇ ಬಿ ನಮೂನೆಗೆ ಅರ್ಜಿ ಸಲ್ಲಿಸಿದರೆ ಪಿ.ಡಿ.ಓ.ಗಳು ಆರ್.ಟಿ.ಸಿ ಕೊಡಿ, ಮನೆ ಕಟ್ಟಿರುವ ಜಾಗವನ್ನು ಭೂ ಪರಿವರ್ತನೆ ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. ಊರಿನಲ್ಲಿರುವ ಊರುಗುಪ್ಪೆ ಸರ್ವೆ ನಂಬರ್‌ನಲ್ಲಿರುವ ಮನೆಗೆ ಭೂಪರಿವರ್ತನೆ ಮಾಡಲು ಸಾಧ್ಯವೇ, ಭೂ ಪರಿವರ್ತನೆಗೆ ದಾಖಲೆಗಳನ್ನು ಕೊಡುವುದಾದರು ಹೇಗೆ? ಈ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೇ, ಬಂದಿದ್ದಲ್ಲಿ, ಸಾರ್ವಜನಿಕರ ಅನುಕೂಲಕ್ಕಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸರ್ಕಾರದ ಆದೇಶ/ಸುತ್ತೋಲೆಗಳಿದ್ದರೆ ಅದರ ಪ್ರತಿ ಒದಗಿಸುವುದು. ರಾಜ್ಯದ ಗ್ರಾಮಗಳಲ್ಲಿರುವ ಗ್ರಾಮಠಾಣ, ಊರುಗುಪ್ಪೆ ಸರ್ವೆ ನಂಬರ್‌ನ ಆರ್.ಟಿ.ಸಿ.ಯಲ್ಲಿ ಗ್ರಾಮಸ್ಥರು ಎಂದು ಬರುತ್ತದೆ.

ಈ ಗೊಂದಲಗಳೆಲ್ಲವನ್ನು ನಿವಾರಿಸಿ, ನಮೂನೆ 9 ಮತ್ತು 11ನೇ ಬಿ ನಮೂನೆ ಬ್ಯಾಂಕುಗಳಿಗೆ ಕೊಡಲು, ಪೌತಿ ಖಾತೆ ಹೀಗೆ ಇನ್ನಿತರೆ ದಾಖಲೆಗಳಿಗೆ ನೀಡಲು ಬೇಕಾಗಿರುವುದರಿಂದ ಈ ನಮೂನೆಯನ್ನು ವಿತರಿಸಲು ಸರ್ಕಾರ ತಕ್ಷಣವೇ ಆದೇಶ ಹೊರಡಿಸುವುದು. ಇಲ್ಲ ಗ್ರಾಮಠಾಣಗಳಲ್ಲಿರುವ/ಊರುಗುಪ್ಪೆ ಸರ್ವೆ ನಂಬರ್‌ಗಳಲ್ಲಿರುವ ಇಂತಹ ಮನೆಗಳಿಗೆ ಹಕ್ಕು ಪತ್ರ ನೀಡಲು "94" ಸಿ ಅನ್ವಯವಾದಗು ಕೂಡಲೇ ಜಾರಿಗೆ ಬರುವಂತೆ ಆದೇಶ ಹೊರಡಿಸುವ ಬಗ್ಗೆ.

***

**ಉತ್ತರ:** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಅನಧಿಕೃತ ಆಸ್ತಿಗಳ ನೊಂದಣಿ, ಮಾರಾಟ ಮುಂತಾದ ವಹಿವಾಟುಗಳನ್ನು ತಡೆಗಟ್ಟುವ ಸಲುವಾಗಿ ಇ-ಸ್ವತ್ತು ತಂತ್ರಾಂಶ ರೂಪಿಸಿ ದಿನಾಂಕ:15-06-2013 ರಿಂದ ಜಾರಿಗೊಳಿಸಲಾಗಿದೆ.

**ಇ-ಸ್ವತ್ತು ತಂತ್ರಾಂಶದ ಜಾರಿಯಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.**

**(ಎ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಈ ಕೆಳಕಂಡ ಕ್ರಮಬದ್ಧ ಆಸ್ತಿಗಳಿಗೆ ಸಂಬಂಧಿಸಿದಂತೆ ಆಸ್ತಿ ವಿವರವನ್ನು ನಮೂನೆ-9 ರಲ್ಲಿ ಹಾಗೂ ಆ ಆಸ್ತಿಯ ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳನ್ನು ನಮೂನೆ 11 ಎ ರಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತನ್ನ ಡಿಜಿಟಲ್ ಸಹಿಯ ಮೂಲಕ ವಿತರಿಸುವರು.**

1. ಗ್ರಾಮ ಠಾಣಾ ಒಳಗಡೆ ಇರುವ ಆಸ್ತಿಗಳು.
2. ಕಂದಾಯ ಇಲಾಖೆಯಿಂದ ಭೂ ಪರಿವರ್ತನೆಯಾಗಿ ಸಕ್ಷಮ ಪ್ರಾಧಿಕಾರಗಳಿಂದ ಲೇಔಟ್ ಪ್ಲಾನ್ ಅನುಮೋದನೆಗೊಂಡಿರುವ ಆಸ್ತಿಗಳು.
3. ಸರ್ಕಾರದ ವಸತಿ ಯೋಜನೆಗಳಾದ ಬಸವ ವಸತಿ, ಗ್ರಾಮೀಣ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಸೃಜಿಸರುವ ಆಸ್ತಿಗಳು.

4. ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಪ್ರಕರಣ 94 ಸಿ, 94ಸಿಸಿ ಮತ್ತು 94 ಡಿ ರಡಿಯಲ್ಲಿ ಮಂಜೂರಾದ ಆಸ್ತಿಗಳು.
5. ಏಕ ನಿವೇಶನ ನಕ್ಷೆ ಅನುಮೋದನೆಯಾಗಿರುವ ಆಸ್ತಿಗಳು (ಸಿಂಗಲ್ ಸೈಟ್ ಲೇಔಟ್ ಪ್ಲಾನ್ ಅಪ್ರೂವಲ್)
6. ಕೈಗಾರಿಕ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾದ ಆಸ್ತಿಗಳು.
7. ವಾಣಿಜ್ಯ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವ ಆಸ್ತಿಗಳು
8. ಬಹು ಅಂತಸ್ತು ವಸತಿ ಸಮುಚ್ಚಯ (ಅಪಾರ್ಟ್ಮೆಂಟ್) - ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವ ಆಸ್ತಿಗಳು.
9. ದಿನಾಂಕ: 16-11-1992 ಕ್ಕಿಂತ ಪೂರ್ವದಲ್ಲಿ ಮಂಡಲ / ಗ್ರಾಮ ಪಂಚಾಯತಿಗಳಿಂದ ಬಡಾವಣೆ ಎಂದು ಅನುಮೋದನೆಯಾಗಿರುವ ಆಸ್ತಿಗಳು.
10. ದಿನಾಂಕ:11-11-2014 ರ ನಂತರ ತಾಲ್ಲೂಕು ಪಂಚಾಯತಿಗಳಿಂದ ಅನುಮೋದನೆಯಾಗಿರುವ ಬಡಾವಣೆ ಆಸ್ತಿಗಳು (ಒಂದು ಎಕರೆಗಿಂತ ಕಡಿಮೆ ವಿಸ್ತೀರ್ಣವಿದ್ದಲ್ಲಿ)
11. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ BDA, BMRDA, BIAAPA, KHB, KIADB, UDA's & LPA's ಅನುಮೋದಿಸಿದ ಬಡಾವಣೆಗಳಲ್ಲಿ ಬರುವ ಆಸ್ತಿಗಳು.
12. ದಿನಾಂಕ:14-06-2013 ರ ಪೂರ್ವದಲ್ಲಿ ಸೃಜನೆಯಾಗಿರುವ ಮತ್ತು ಗ್ರಾಮ ಪಂಚಾಯತಿಗಳು ನೀಡಿರುವ ಲೈಸೆನ್ಸ್ ಪಡೆದು ಖಾಯಂಯಾಗಿ ಈಗಾಗಲೇ ಮನೆ ನಿರ್ಮಾಣ ಮಾಡಿಕೊಂಡಿರುವ ಆಸ್ತಿಗಳು.

**(ಬಿ) ನಮೂನೆ 11-ಬಿ ಯಲ್ಲಿ ನೀಡಲಾಗುವ ಕ್ರಮಬದ್ಧವಲ್ಲದ ಆಸ್ತಿಗಳು:-**

1. ದಿನಾಂಕ:14-06-2013 ಕ್ಕಿಂತ ಮುಂಚೆ 1 ಬಾರಿ ಕ್ರಯವಾಗಿರುವ ನಿವೇಶನಗಳು,
2. ದಿನಾಂಕ:14-06-2013 ಕ್ಕೆ ಮೊದಲು ಕಟ್ಟಡವಾಗಿದ್ದು, ಈ ದಿನಾಂಕಕ್ಕಿಂತ ಮುಂಚಿನ 6 ತಿಂಗಳ ಪೂರ್ವದ ಯಾವುದಾದರೂ ಒಂದು ತಿಂಗಳ ವಿದ್ಯುಚ್ಛಕ್ತಿ ಬಿಲ್‌ನ್ನು ಒದಗಿಸಿರುವ ಪ್ರಕರಣಗಳು,
3. ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಪ್ರಕರಣ 95 (1) ರನ್ವಯ ಫಾರಂ ಬಿಲ್ಡಿಂಗ್ / ಹೌಸ್ ಎಂದು ಪರಿಗಣಿಸುವ ಆಸ್ತಿಗಳು ಮತ್ತು
4. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಪ್ರಕರಣ 95(2) ರನ್ವಯ ತಹಶೀಲ್ದಾರ್‌ರವರು ನೀಡಿರುವ ಹಿಂಬರಹದ ಪ್ರತಿ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ವಿತರಿಸುವುದಕ್ಕೆ ವಿನಾಯಿತಿ ನೀಡಿ ನಮೂನೆ 11ಬಿ ಯನ್ನು ಕೈಬರಹದ ಮೂಲಕ ನೀಡಲು ಅವಕಾಶ ಕಲ್ಪಿಸಲಾಗಿದೆ.

ರಾಜ್ಯದ ಗ್ರಾಮಗಳಲ್ಲಿರುವ ಗ್ರಾಮಠಾಣಾ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ನಿವಾಸಿಗಳಿಗೆ ನಮೂನೆ 9 ಮತ್ತು 11ಬಿ ನಮೂನೆ ವಿತರಿಸದೆ ಸಾರ್ವಜನಿಕರಿಗೆ ಗ್ರಾಮ ಪಂಚಾಯಿತಿಗಳು ತೊಂದರೆ ನೀಡುತ್ತಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 28 ಮತ್ತು 30 ರನ್ವಯ ನಮೂನೆ-9 & 11ಎ ಹಾಗೂ ನಮೂನೆ -11ಬಿ ವಹಿಗಳನ್ನು ನಿರ್ವಹಿಸಲಾಗುತ್ತಿದೆ. ಆಸ್ತಿಗಳ ವರ್ಗೀಕರಣಕ್ಕೆ ಅನುಗುಣವಾಗಿ ಅವುಗಳ ಸ್ವಾಧೀನತೆಗೆ ಸಂಬಂಧಿಸಿದಂತೆ ಹಾಗೂ ಮಾಲೀಕರ ವಿವರಗಳ ದಾಖಲೆಗಳ ಸಂಗ್ರಹದ ಮೂಲಕ ಇ-ಸ್ವತ್ತು ತಂತ್ರಾಂಶದಲ್ಲಿ ನಮೂನೆ-9, 11ಎ ಅಥವಾ 11ಬಿ ಗಳ ವಿತರಣೆಗೆ ಕ್ರಮ ವಹಿಸಲಾಗಿದೆ.

ರಾಜ್ಯದ ಗ್ರಾಮಗಳಲ್ಲಿರುವ ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ನಿವಾಸಿಗಳಿಗೆ ಕಂದಾಯ ಇಲಾಖೆಯಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಪ್ರಕರಣ 94ಸಿ ರಂತೆ ಹಕ್ಕುಪತ್ರಗಳನ್ನು ವಿತರಣೆ ಮಾಡಿದ ನಂತರದಲ್ಲಿ ಗ್ರಾಮ ಪಂಚಾಯಿತಿಗಳಿಂದ ನಮೂನೆ 9 ಮತ್ತು 11ಎ ಗಳನ್ನು ವಿತರಣೆ ಮಾಡಲು ಕ್ರಮ ವಹಿಸಲಾಗುತ್ತದೆ.

**ಸಂಖ್ಯೆ: ಗ್ರಾಅಪ 711 ಗ್ರಾಪಂಅ 2024**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.